## ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿ/ಸಿಬ್ಬಂದಿ-3/ಪಾಲಿಸಿ/ಹೊಕಾಅ/2021-22

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ,
ಮಲ್ಲೇಶ್ವರ, ಬೆಂಗಳೂರು-12,
ದಿನಾಂಕ:17-07-2021.

### -: ಸುತ್ತೋಲೆ :-

ವಿಷಯ: 2021-22ನೇ ಶೈಕ್ಷಣಿಕ ಸಾಲಿನಲ್ಲಿ ಹೊಸ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇಚ್ಛಿಸುವ ಅರ್ಹ ಶಿಕ್ಷಣ ಸಂಸ್ಥೆ / ಟ್ರಸ್ಟ್‌ಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ:
1. ಕರ್ನಾಟಕ ಪದವಿ ಪೂರ್ವ ಶಿಕ್ಷಣ ನಿಯಮಗಳು 2006.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ: 08-03-2018
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 107 ಟಿಪಿಯು 2017 ದಿನಾಂಕ: 27-09-2018.
4. ಸರ್ಕಾರದ ಆದೇಶದ ಸಂಖ್ಯೆ: ಇಡಿ 331 ಎಸ್‌ಹೆಚ್‌ಹೆಚ್ 2018 ದಿನಾಂಕ 11-09-2018.
5. ಸರ್ಕಾರದ ಪತ್ರ ಸಂಖ್ಯೆ: ಇಪಿ 46 ಎಸ್‌ಹೆಚ್‌ಹೆಚ್ 2020 ದಿನಾಂಕ 17-03-2020.
6. ಸರ್ಕಾರದ ಪತ್ರ ಸಂಖ್ಯೆ: ಇಪಿ 90 ಡಿಜಿಡಿ 2019 ದಿನಾಂಕ 23-04-2020.
7. ಈ ಕಛೇರಿ ಜ್ಞಾಪನ ಸಂಖ್ಯೆ: ಪಪೂಶಿ/ಸಿಬ್ಬಂದಿ-3/ಪಾಲಿಸಿ/ಹೊಸಂಕು/ಹೆವಿಕು/2020-21 ದಿನಾಂಕ 05-06-2020.
8. ಪೊಲೀಸ್ ಮಹಾ ನಿರ್ದೇಶಕರು ಹಾಗೂ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಇವರ ಪತ್ರ ಸಂಖ್ಯೆ: ಜಿಬಿಸಿ(1)502/2004 ದಿನಾಂಕ 08-07-2020.
9. ಈ ಕಛೇರಿ ಸುತ್ತೋಲೆ ಸಂಖ್ಯೆ: ಪಪೂಶಿ/ಸಿಬ್ಬಂದಿ-3/ಪಾಲಿಸಿ/ಹೊಸಂಕು/ಹೆವಿಕು/2020-21 ದಿನಾಂಕ 31-07-2020.
10. ಸರ್ಕಾರದ ಪತ್ರ ಸಂಖ್ಯೆ: ಇಪಿ 139 ಎಸ್‌ಹೆಚ್‌ಹೆಚ್ 2021 ದಿನಾಂಕ:15-07-2021

-*-*-

2021-22ನೇ ಶೈಕ್ಷಣಿಕ ಸಾಲಿಗೆ ಹೊಸ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲು ಪ್ರಕ್ರಿಯೆಯನ್ನು ಕೈಗೊಳ್ಳುವಂತೆ ಉಲ್ಲೇಖ-10ರ ಪತ್ರದಲ್ಲಿ ಸರ್ಕಾರವು ನಿರ್ದೇಶಿಸಿದೆ. ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4 ರನ್ವಯ 2021-22ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದಲ್ಲಿ ಹೊಸ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇಚ್ಛಿಸುವ ಅರ್ಹ ಖಾಸಗಿ ಶಿಕ್ಷಣ ಸಂಸ್ಥೆ / ಟ್ರಸ್ಟ್‌ಗಳಿಂದ

...2

ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಅರ್ಹ ಶಿಕ್ಷಣ ಸಂಸ್ಥೆ / ಟ್ರಸ್ಟ್‌ಗಳು ಇಲಾಖೆಯ ವೆಬ್‌ಸೈಟ್ **"www.pue.kar.nic.in"** ಇಲ್ಲಿ ಲಾಗಿನ್ ಆಗಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು "ನಿಗದಿತ ನಮೂನೆ" (Form-I) ರಲ್ಲಿ ದಿನಾಂಕ 26-07-2021 ರೊಳಗಾಗಿ ಸಂಸ್ಥೆ / ಟ್ರಸ್ಟ್‌ಗಳು ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ನಿಗದಿತ ಕಾಲವಕಾಶದೊಳಗಾಗಿ ಆನ್‌ಲೈನ್ ಮೂಲಕ ಸಲ್ಲಿಸಲ್ಪಡುವ ಅರ್ಜಿಗಳನ್ನು ಮಾತ್ರ ನಿಯಮಾನುಸಾರ ಪರಿಶೀಲಿಸಲಾಗುವುದು. ಮುದ್ದಾಂ ಅಥವಾ ನೇರವಾಗಿ ಸಲ್ಲಿಸಲ್ಪಡುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

1) ಶಿಕ್ಷಣ ಸಂಸ್ಥೆ / ಟ್ರಸ್ಟ್ 2019-20 ಮತ್ತು 2020-21ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು Form-I ರಲ್ಲಿ ಆನ್‌ಲೈನ್ ಮೂಲಕ ಈಗಾಗಲೇ ಸಲ್ಲಿಸಿರುವ ಅರ್ಜಿಯನ್ನು ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(1) ರನ್ವಯ ಈ ಕಛೇರಿಯಲ್ಲಿ ನೋಂದಾಯಿಸಿಕೊಳ್ಳಲಾಗಿದೆ. ಕರ್ನಾಟಕ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2) ಮತ್ತು 4(3) ರನ್ವಯ Letter of intentನ್ನು ಸಹ ನೀಡಲಾಗಿದೆ. ಉದ್ದೇಶಿತ ಕಾಲೇಜು ಕಟ್ಟಡದಲ್ಲಿ ಮೂಲಭೂತ ಸೌಕರ್ಯಗಳನ್ನು ಹಾಗೂ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳದಿರುವ ಮತ್ತು ಅಗತ್ಯ ದಾಖಲೆಗಳನ್ನು ಹೊಂದಿರದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಆಕ್ಷೇಪಿಸಿ ಸಂಬಂಧಿಸಿದ ಶಿಕ್ಷಣ ಸಂಸ್ಥೆ / ಟ್ರಸ್ಟ್‌ಗಳಿಗೆ ಹಿಂಬರಹ ನೀಡಲಾಗಿದೆ. 03 ವರ್ಷಗಳ ಕಾಲಾವಕಾಶ ಪಡೆದಿರುವ ಶಿಕ್ಷಣ ಸಂಸ್ಥೆ / ಟ್ರಸ್ಟ್‌ಗಳಿಗೆ 2021-22ನೇ ಸಾಲಿಗೆ ನಿಯಮಾನುಸಾರ ಕಾಲೇಜು ಕಟ್ಟಡದಲ್ಲಿ ಎಲ್ಲಾ ರೀತಿಯ ಮೂಲಭೂತ ಸೌಕರ್ಯ ಹಾಗೂ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡು ಮತ್ತು ಈ ಹಿಂದೆ ಆಕ್ಷೇಪಿಸಿದ ಅಗತ್ಯ ದಾಖಲೆಗಳೊಂದಿಗೆ ಹೊಸದಾಗಿ ಕಾಲೇಜು ಪ್ರಾರಂಭಿಸಲು ಕೊನೆಯ ಅವಕಾಶವಾಗಿದ್ದು, ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗೆ ಅಗತ್ಯ ಪ್ರಸ್ತಾವನೆ ಸಲ್ಲಿಸಿ, ದ್ವಿಸದಸ್ಯ ಸಮಿತಿಯ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಮುಚಿತ ಮಾರ್ಗದಲ್ಲಿ ನಿರ್ದೇಶನಾಲಯಕ್ಕೆ ಸಲ್ಲಿಸಲು ತಿಳಿಸಿದೆ.

2) ಕರ್ನಾಟಕ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2) ಮತ್ತು 4(3) ರಂತೆ, 2021-22ನೇ ಶೈಕ್ಷಣಿಕ ಸಾಲಿಗೆ ಅರ್ಜಿ ಸಲ್ಲಿಸಲು ಇಚ್ಛಿಸುವ ಶಿಕ್ಷಣ ಸಂಸ್ಥೆ / ಟ್ರಸ್ಟ್‌ಗಳು ಮುಂದಿನ ಮೂರು (3) ವರ್ಷಗಳಲ್ಲಿ ಕೆಳಕಂಡ ಕ್ರಮಗಳನ್ನು ಅನುಸರಿಸುವುದು:

ಶಿಕ್ಷಣ ಸಂಸ್ಥೆ / ಟ್ರಸ್ಟ್ ಹೊಸದಾಗಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸ್ಥಳದಲ್ಲಿ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2)(a) ರಂತೆ ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿಯೇ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ:08-03-2018 ರಂತೆ ಈ ಕೆಳಗಿನ ವಿಸ್ತೀರ್ಣದ ನಿವೇಶನವನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

| SL No | Location | Extent of land |
|---|---|---|
| I. Educational institution imparting pre- primary to higher secondary education, or primary to higher secondary education, or pre-primary to secondary education | | |
| 1 | BBMP and other Municipal corporation areas | 2000 Sq meter |
| 2 | Other areas | 4000 Sq meter |
| II. Educational institution imparting only either primary and secondary education, or imparting secondary and higher secondary education | | |
| 3 | BBMP and other Municipal corporation areas | 1500 Sq meter |
| 4 | Other areas | 3000 Sq meter |
| III. Educational Institution imparting only Primary education or Secondary Education, or Higher Secondary Education | | |
| 5 | BBMP and other Municipal corporation areas | 1000 Sq meter |
| 6 | Other areas | 2000 Sq meter |

...3

i. ಸಂಸ್ಥೆ / ಟ್ರಸ್ಟ್ ಹೊಸದಾಗಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ನಿವೇಶನವು ಸ್ವಂತ ನಿವೇಶನವೇ ಅಥವಾ 30 ವರ್ಷಕ್ಕೆ ಭೋಗ್ಯವೇ? ಕಟ್ಟಡವು ಆಡಳಿತ ಮಂಡಳಿಯ ಸ್ವಂತದ್ದಾಗಿರದೆ **ಭೋಗ್ಯಕ್ಕೆ** ಪಡೆದಿದ್ದಲ್ಲಿ, ಭೋಗ್ಯದ ಕರಾರನ್ನು **ಕನಿಷ್ಟ 30 ವರ್ಷಗಳ ಅವಧಿಗೆ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಯಾಗಿರಬೇಕು.** ಸದರಿ ಕರಾರನ್ನು 30 ವರ್ಷಗಳು ಪೂರ್ಣಗೊಳ್ಳುವ ಮುಂಚಿತವಾಗಿ ರದ್ದುಪಡಿಸಲು ಅಥವಾ ತಿದ್ದುಪಡಿ ಮಾಡಲು ಅವಕಾಶವಿಲ್ಲದಂತೆ ಕರಾರು ಒಪ್ಪಂದವಾಗಿರಬೇಕು. **ಈ ಕರಾರು ಒಪ್ಪಂದವನ್ನು ನಿಗದಿತ ಮೊತ್ತದ ಇ–ಸ್ಟಾಂಪ್‌ನಲ್ಲಿ ಸಂಬಂಧಿಸಿದ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಾಯಿಸಿರಬೇಕು. ಸದರಿ ನಿವೇಶನ ಮತ್ತು ಕಟ್ಟಡದ ಖಾತಾ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಹೆಸರಿಗೆ ವರ್ಗಾವಣೆಯಾಗಿರಬೇಕು. ಪ್ರಸ್ತುತ ಸದರಿ ನಿವೇಶನ ಮತ್ತು ಕಟ್ಟಡದ ಖಾತಾ, ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಹೆಸರಿನಲ್ಲಿರಬೇಕು.**

ii. ಕರ್ನಾಟಕ ಪದವಿ ಪೂರ್ವ ಶಿಕ್ಷಣ ನಿಯಮ 4(2) ಮತ್ತು 4(3) ರಂತೆ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವ ಉದ್ದೇಶಕ್ಕಾಗಿಯೇ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪದವಿ ಪೂರ್ವ ಕಾಲೇಜಿಗಾಗಿಯೇ ಸೂಕ್ತ ಕಟ್ಟಡವನ್ನು ನಿರ್ಮಿಸುವುದು ಮತ್ತು ಸದರಿ ನಿಯಮಗಳಂತೆ ಸದರಿ ನಿವೇಶನ / ಕಟ್ಟಡದಲ್ಲಿ ಅಗತ್ಯ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಅಳವಡಿಸಿಕೊಳ್ಳಬೇಕು.

iii. ಕರ್ನಾಟಕ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4(2) ಮತ್ತು 4(3) ರಂತೆ ನಿವೇಶನ ಮತ್ತು ಕಟ್ಟಡವನ್ನು ಹೊಂದಿ, ಅದರಲ್ಲಿ ಬೋಧಿಸಲು ಅಪೇಕ್ಷಿಸುವ ಸಂಯೋಜನೆಗಳು ಮತ್ತು ವಿಭಾಗಗಳಿಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಅಳವಡಿಸಿಕೊಂಡ ನಂತರ, ನಿಯಮ 4(4) ರಂತೆ ಸಂಸ್ಥೆಯ ಅಧ್ಯಕ್ಷರು / ಕಾರ್ಯದರ್ಶಿಯವರು ಇದರೊಂದಿಗೆ ಲಗತ್ತಿಸಿರುವ ಅನುಬಂಧದ ಮಾಹಿತಿಯೊಂದಿಗೆ ನಿಗದಿಪಡಿಸಿದ ಸಮಯದೊಳಗೆ ಸೂಕ್ತ ವಿವರಗಳು / ದಾಖಲೆಗಳೊಂದಿಗೆ ನಿರ್ದೇಶನಾಲಯಕ್ಕೆ ತಿಳಿಸಬೇಕು.

iv. Letter of intent ಪಡೆದ 03 (ಮೂರು) ವರ್ಷದೊಳಗೆ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ದತೆ ಮಾಡಿಕೊಳ್ಳದಿದ್ದಲ್ಲಿ, ನಿಯಮ 4(4) ರಂತೆ ಅವಧಿಯನ್ನು ವಿಸ್ತರಿಸಲು ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ, ನೀಡಿರುವ Letter of intentನ್ನು ನಿಯಮ 4(12) ರಂತೆ ರದ್ದುಗೊಳಿಸಲಾಗುವುದು Letter of intent ಮೂರು ವರ್ಷಗಳ ನಂತರ ಸಿಂಧುತ್ವ / ಮಾನ್ಯತೆಯನ್ನು ಕಳೆದುಕೊಳ್ಳುವುದರಿಂದ ಮೂರು ವರ್ಷದೊಳಗೆ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅಗತ್ಯ ಸಿದ್ದತೆ ಮಾಡಿಕೊಳ್ಳದಿದ್ದಲ್ಲಿ, ಮುಂದಿನ ವರ್ಷಗಳಲ್ಲಿ ಪುನಃ ಹೊಸದಾಗಿ ಅರ್ಜಿ ಶುಲ್ಕವನ್ನು ಸಂದಾಯಿಸಿ ಅರ್ಜಿ ಸಲ್ಲಿಸಬೇಕಾಗುತ್ತದೆ.

v. ಒಂದು ವೇಳೆ **2021–22**ನೇ ಶೈಕ್ಷಣಿಕ ಸಾಲಿನಿಂದಲೇ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಯಮ 4(2) ಮತ್ತು 4(3) ರಂತೆ ಅಗತ್ಯ ಸಿದ್ದತೆಗಳನ್ನು ಈಗಾಗಲೇ ಮಾಡಿಕೊಂಡಿದ್ದಲ್ಲಿ, ನಿಯಮ 4(4) ರಂತೆ ಅಗತ್ಯ ಮಾಹಿತಿ ಮತ್ತು ದಾಖಲೆಗಳೊಂದಿಗೆ ಹಾಗು ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ ಮಾಹಿತಿಯನ್ನು ರೂ.100/–ರ ಇ–ಸ್ಟಾಂಪ್‌ನಲ್ಲಿ ನೋಟರಿ ದೃಢೀಕೃತ ಪ್ರಮಾಣ ಪತ್ರದೊಂದಿಗೆ ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿರುವ ವೇಳಾಪಟ್ಟಿಗೆ ಅನುಗುಣವಾಗಿ ಆನ್‌ಲೈನ್‌ನಲ್ಲಿ ಅಗತ್ಯ ಮಾಹಿತಿಗಳನ್ನು ಅಪ್‌ಲೋಡ್ ಮಾಡಿ ಸಲ್ಲಿಸುವುದು.

3) ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿರುವ ಸಂಸ್ಥೆ / ಟ್ರಸ್ಟ್ ನಿಯಮಗಳನ್ವಯ ಬಹು ಮುಖ್ಯವಾಗಿ ಕೆಳಕಂಡ ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು, ಸಂಸ್ಥೆ / ಟ್ರಸ್ಟ್ ಅಧಿಕೃತವಾಗಿ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಯಾಗಿರಬೇಕು.

...4

i. ಸಂಸ್ಥೆ / ಟ್ರಸ್ಟ್‌ನ ಮಾಲೀಕತ್ವದ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರಬಾರದು. ಸಂಸ್ಥೆ / ಟ್ರಸ್ಟ್‌ನ ಮಾಲೀಕತ್ವದ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ಯಾವುದೇ ರೀತಿಯ ಮಧ್ಯಂತರ ಆದೇಶ ಅಥವಾ ತಡೆಯಾಜ್ಞೆ ಇರಬಾರದು.

ii. ಸಂಸ್ಥೆ / ಟ್ರಸ್ಟ್ ನಿಯಮಗಳನ್ವಯ ಪ್ರಸ್ತುತ ಸಾಲಿನವರೆಗೆ ನವೀಕರಣಗೊಂಡಿರಬೇಕು. ಸಕ್ಷಮ ಪ್ರಾಧಿಕಾರವು ದೃಢೀಕರಿಸಿರುವ ಪ್ರಸ್ತುತ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯರ ದೃಢೀಕೃತ ಪಟ್ಟಿಯನ್ನು ಹೊಂದಿರಬೇಕು.

iii. ಸಂಸ್ಥೆಯ ಬೈಲಾದಲ್ಲಿರುವಂತೆ ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯರಿರಬೇಕು.

iv. ಸಂಸ್ಥೆ / ಟ್ರಸ್ಟ್ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಯಮಗಳನ್ವಯ **ರೂ.28.80 ಲಕ್ಷಗಳ** ಸ್ಥಿರ ಮತ್ತು ಚರ ಆಸ್ತಿಯನ್ನು ಹೊಂದಿರಬೇಕು.

v. ಸಂಸ್ಥೆ / ಟ್ರಸ್ಟ್‌ನ ಆಡಿಟ್‌ನ್ನು ನಿಯಮಾನುಸಾರ ಪ್ರಸ್ತುತ ಸಾಲಿನವರೆಗೆ ಮಾಡಿಸಿರಬೇಕು.

vi. ಉದ್ದೇಶಿತ ಪದವಿ ಪೂರ್ವ ಕಾಲೇಜಿಗಾಗಿ ಸಂಸ್ಥೆ / ಟ್ರಸ್ಟ್ ತನ್ನ ಸ್ವಾಧೀನಾನುಭವದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ: 08-03-2018 ರನ್ವಯ ಕನಿಷ್ಠ ಚದರ ಅಡಿಗಳ ನಿವೇಶನವನ್ನು ಹೊಂದಿರಬೇಕು.

vii. ಸದರಿ ಸಂಸ್ಥೆ/ ಟ್ರಸ್ಟ್ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ: 08-03-2018 ರಂತೆ ವಿಸ್ತೀರ್ಣದ ನಿವೇಶನವನ್ನು ಹೊಂದಿರತಕ್ಕದ್ದು. ನಿವೇಶನ ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯ ಅಧ್ಯಕ್ಷರು / ಚೇರ್‌ಮನ್ / ಕಾರ್ಯದರ್ಶಿಯವರ **ಪದನಾಮದಲ್ಲಿ** ಇರಬೇಕು. ಈ ಸ್ಥಿರ ಆಸ್ತಿಯು ಯಾವುದೇ ವ್ಯಕ್ತಿಯ ವೈಯಕ್ತಿಕ ಹೆಸರಿನಲ್ಲಿ ಇರಬಾರದು.

viii. ನಿವೇಶನ / ಕಟ್ಟಡವನ್ನು ನೋಟರಿಯವರ ಸಮ್ಮುಖದಲ್ಲಿ ಪ್ರಮಾಣ ಮಾಡಿರುವ ಕರಾರು ಪತ್ರಗಳಿಗೆ ನಿಯಮಗಳನ್ವಯ ಮಾನ್ಯತೆ ಇರುವುದಿಲ್ಲ. ಬಾಡಿಗೆ ಕರಾರಿನ ಮೇಲೆ ಪಡೆದಿರುವ ನಿವೇಶನ / ಕಟ್ಟಡವನ್ನು ಸಂಸ್ಥೆ / ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿರುವ ನಿವೇಶನ / ಕಟ್ಟಡ ಎಂದು ಪರಿಗಣಿಸಲು ನಿಯಮಗಳಲ್ಲಿ ಅವಕಾಶಗಳಿರುವುದಿಲ್ಲ. ಕರಾರು / ಒಡಂಬಂಡಿಕೆಯನ್ನು ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸಿರತಕ್ಕದ್ದು.

ix. ಉದ್ದೇಶಿತ ಪದವಿ ಪೂರ್ವ ಕಾಲೇಜಿನ ನಿವೇಶನ / ಕಟ್ಟಡದಲ್ಲಿ ನಿಯಮ 4ರನ್ವಯ ಮೂಲಭೂತ ಸೌಲಭ್ಯಗಳಿರಬೇಕು.

4) 2021-22ನೇ ಸಾಲಿನಲ್ಲಿಯೇ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ಸಲ್ಲಿಸುವ ಪ್ರಸ್ತಾವನೆಯು ನಿಯಮ 4(2), 4(3) ಮತ್ತು 4(4)ಕ್ಕೆ ಅನುಗುಣವಾಗಿ ಇಲ್ಲದಿದ್ದಲ್ಲಿ ಹಾಗೂ ಅನುಬಂಧದ ಮಾಹಿತಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸದಿದ್ದಲ್ಲಿ, ತಪಾಸಣಾ ಸಮಿತಿಗೆ ಸ್ಥಳ ಪರಿಶೀಲನೆ ನಡೆಸುವ ಕುರಿತು ಸೂಚನೆ ನೀಡದೆ, ಈ ಹಂತದಲ್ಲಿಯೇ 2021-22ನೇ ಸಾಲಿನಲ್ಲಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಬೇಕೆನ್ನುವ ಸಂಸ್ಥೆಯ ಕೋರಿಕೆಯನ್ನು ತಿರಸ್ಕರಿಸಲಾಗುವುದು.

5) ಕಾಲೇಜಿನ ನಿವೇಶನ, ಕಟ್ಟಡ ಮತ್ತು ಇರಬೇಕಾದ ಮೂಲಭೂತ ಸೌಲಭ್ಯಗಳ ಕುರಿತು ಜಿಲ್ಲಾ ತಪಾಸಣಾ ಸಮಿತಿಯು ಉದ್ದೇಶಿತ ಪದವಿ ಪೂರ್ವ ಕಾಲೇಜಿನ ಸ್ಥಳ ಪರಿಶೀಲನೆ ಮತ್ತು ತಪಾಸಣೆ ನಡೆಸಿ ವರದಿ ನೀಡುವ ಸಂಬಂಧ ಸಿದ್ಧಪಡಿಸಿರುವ ನಮೂನೆ-5 ರಲ್ಲಿ ವಿವರಿಸಲಾಗಿದೆ.

6) ಅರ್ಜಿಯೊಂದಿಗೆ ಅರ್ಜಿ ಶುಲ್ಕ ರೂ.50,000/- ಪಾವತಿಸಿರುವ ಮೂಲ ಚಲನ್‌ನ್ನು ಸಂಸ್ಥೆ/ಟ್ರಸ್ಟ್‌ಗಳು ಪ್ರಸ್ತಾವನೆಯೊಂದಿಗೆ ಸಲ್ಲಿಸತಕ್ಕದ್ದು.

7) 2021-22ನೇ ಶೈಕ್ಷಣಿಕ ಸಾಲಿನಲ್ಲಿ ಆಯಾ ಜಿಲ್ಲೆಯಲ್ಲಿ ಪ್ರಾರಂಭಿಸಲು ಉದ್ದೇಶಿಸಿರುವ ಖಾಸಗಿ ಪದವಿ ಪೂರ್ವ ಕಾಲೇಜುಗಳು ನಿಯಮಗಳನ್ವಯ ಅರ್ಹತೆ ಹೊಂದಿರುವ ಕುರಿತು ಪರಿಶೀಲಿಸಿ ವರದಿ..5

ನೀಡಲು, ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 2(7) ರಲ್ಲಿ ಸೂಚಿಸಿರುವಂತೆ ಜಿಲ್ಲಾ ಉಪ ನಿರ್ದೇಶಕರ ಹಂತದಲ್ಲಿ ಕೂಡಲೇ ತಪಾಸಣಾ ಸಮಿತಿ (Inspection Committee) ರಚಿಸಿಕೊಳ್ಳತಕ್ಕದ್ದು.

8) ಸರ್ಕಾರದ ಆದೇಶ ಸಂಖ್ಯೆ: ಇಡಿ 331 ಎಸ್‌ಹೆಚ್‌ಹೆಚ್ 2018 ದಿನಾಂಕ 11-09-2018 ರಲ್ಲಿ ಸರ್ಕಾರವು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡುವ ಸರ್ಕಾರದ ಆದೇಶದಲ್ಲಿ "ಒಂದು ವರ್ಷದೊಳಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳುವುದಾಗಿ ಸಂಬಂಧಪಟ್ಟ ಸಂಸ್ಥೆಯಿಂದ ಮುಚ್ಚಳಿಕೆ ಪತ್ರ ಪಡೆದು ಅನುಮತಿ ನೀಡತಕ್ಕದ್ದು" ಎಂಬ ಷರತ್ತನ್ನು ಇನ್ನು ಮುಂದೆ ಕೈ ಬಿಟ್ಟು "ಕಾಲೇಜು ಕಟ್ಟಡದಲ್ಲಿ ಎಲ್ಲಾ ಸುರಕ್ಷತಾ ಕ್ರಮಗಳನ್ನು ಅಳವಡಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಂಡೇ ಮಾನ್ಯತೆ ನೀಡತಕ್ಕದ್ದು." ಎಂಬುದಾಗಿ ಸರ್ಕಾರವು ಆದೇಶಿಸಿದೆ.

9) ಉಲ್ಲೇಖ-5ರ ಸರ್ಕಾರದ ನಿರ್ದೇಶದನ್ವಯ ಹಾಗೂ ಉಲ್ಲೇಖ-7ರಲ್ಲಿ ಸೂಚಿಸಿರುವಂತೆ (National Building code) ಮಾನದಂಡಗಳನ್ವಯ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರುಗಳನ್ನು ಸಂಪರ್ಕಿಸಿ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರ / ಕ್ಲಿಯರೆನ್ಸ್ ಸರ್ಟಿಫಿಕೆಟ್‌ಗಳನ್ನು ಪಡೆಯುವುದು.

10) ಉಲ್ಲೇಖ-8ರ ಪತ್ರದನ್ವಯ ಉಲ್ಲೇಖ-9ರ ಸುತ್ತೋಲೆಯಲ್ಲಿ ನೀಡಿರುವ ಸೂಚನೆಯಂತೆ ಶೈಕ್ಷಣಿಕ ಕಟ್ಟಡಗಳಿಗೆ ನೀಡಲಾಗಿರುವ ಸಲಹಾ ಪತ್ರದಲ್ಲಿ (Advisory Certificate) ಸೂಚಿಸಲಾಗಿರುವ ಅಗ್ನಿ ನಿವಾರಣೆ ಮತ್ತು ಅಗ್ನಿಶಮನ ಮುನ್ನೆಚರಿಕೆ ಕ್ರಮಗಳನ್ನು ಕಾರ್ಯಾನುಷ್ಠಾನಗೊಳಿಸದೇ ಇದ್ದಲ್ಲಿ ಕೂಡಲೇ ಕಾರ್ಯಾನುಷ್ಠಾನಗೊಳಿಸಿ ನಿಗದಿತ ಸಮಯದೊಳಗೆ ಅಗ್ನಿಶಾಮಕ ಇಲಾಖೆಯ **ಸಮಾಪನಾ ಪತ್ರವನ್ನು (Compliance Certificate)** ಪಡೆಯತಕ್ಕದ್ದು.

2021-22ನೇ ಸಾಲಿಗೆ ಹೊಸ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಸಂಬಂಧ ಅನುಸರಿಸಬೇಕಾದ ವೇಳಾ ಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ. ನಿಗದಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲು ಅವಕಾಶವಿರುವುದಿಲ್ಲ.

ನಿರ್ದೇಶನಾಲಯವು ಹೊಸ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಿಗೆ ಮಂಜೂರಾತಿ ಆದೇಶ ಹೊರಡಿಸಿದ ನಂತರ ಸದರಿ ಪದವಿ ಪೂರ್ವ ಕಾಲೇಜುಗಳಿಗೆ ಪ್ರಥಮ ಶೈಕ್ಷಣಿಕ ಮಾನ್ಯತೆ ಕೋರಿ ನಿರ್ದೇಶನಾಲಯಕ್ಕೆ ಸಲ್ಲಿಸಲ್ಪಡುವಂತಹ ಎಲ್ಲಾ ಪ್ರಸ್ತಾವನೆಗಳನ್ನು ಆಯಾಯಾ ಜಿಲ್ಲಾ ಉಪ ನಿರ್ದೇಶಕರುಗಳು ದಿನಾಂಕ:10-09-2021 ರೊಳಗೆ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಪ್ರಥಮ ಶೈಕ್ಷಣಿಕ ಮಾನ್ಯತೆಯನ್ನು ನೀಡಲು ಯೋಗ್ಯ ಮತ್ತು ಅರ್ಹ ಪ್ರಸ್ತಾವನೆಯೇ? ಎಂಬುದನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರವೇ ಸ್ಪಷ್ಟ ಅಭಿಪ್ರಾಯ / ಶಿಫಾರಸ್ಸಿನೊಂದಿಗೆ ಜಿಲ್ಲಾ ಉಪ ನಿರ್ದೇಶಕರು ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು.

ಅರ್ಜಿ ಸಲ್ಲಿಸುವುದರಿಂದ ಮೊದಲ್ಗೊಂಡು ಎಲ್ಲಾ ಪ್ರಕ್ರಿಯೆಗಳನ್ನು ಪ್ರಸಕ್ತ ಸಾಲಿನಲ್ಲಿ ಆನ್‌ಲೈನ್ ಮುಖಾಂತರವೇ ನಡೆಸಲಾಗುವುದು.

Snehal

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

*ಗೆ,*

ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು ಮುಂದಿನ ಅಗತ್ಯ ಕ್ರಮಕ್ಕಾಗಿ.

...6

ಪ್ರತಿ ಮಾಹಿತಿಗಾಗಿ:–

1. ಜಂಟಿ ನಿರ್ದೇಶಕರು (ಮಾ&ಅ), ಉಪನಿರ್ದೇಶಕರು (ಮಾ&ಅ), ಸಹಾಯಕ ನಿರ್ದೇಶಕರು, ಸಿಬ್ಬಂದಿ–3ರ ಶಾಖಾಧಿಕಾರಿಗಳು / ಅಧೀಕ್ಷಕರು ಮತ್ತು ಸಂಬಂಧಿಸಿದ ವಿಷಯ ನಿರ್ವಾಹಕರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಸಹಾಯಕ ನಿರ್ದೇಶಕರು, ಇ–ಆಡಳಿತ ಶಾಖೆ, ಪಪೂಶಿಇ ಇವರಿಗೆ ಸುತ್ತೋಲೆಯನ್ನು ಇಲಾಖಾ ಅಂತರ್ಜಾಲದಲ್ಲಿ ಆಳವಡಿಸಲು.
3. ಕಛೇರಿ / ಹೆಚ್ಚುವರಿ.

**2021-22ನೇ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಸಂಬಂಧ ಅನುಸರಿಸಬೇಕಾದ ಕರಡು ತಾತ್ಕಾಲಿಕ ವೇಳಾಪಟ್ಟಿ**

| ಕ್ರ ಸಂ | ಘಟನಾವಳಿಗಳ ವಿವರ | ದಿನಾಂಕ |
|---|---|---|
| 1 | ನೋಂದಾಯಿತ ಅರ್ಹ ಟ್ರಸ್ಟ್ / ಸೊಸೈಟಿಗಳಿಂದ ರಾಜ್ಯದಲ್ಲಿ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿ ನೀಡಿರುವ ಪ್ರಕಟಣೆಯನ್ನು ಪತ್ರಿಕೆಗಳಲ್ಲಿ ಪ್ರಕಟಿಸುವ ದಿನಾಂಕ. | 17-07-2021 |
| 2 | ಅರ್ಹ ಟ್ರಸ್ಟ್ / ಸೊಸೈಟಿಗಳಿಂದ ರಾಜ್ಯದಲ್ಲಿ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಶುಲ್ಕ ರೂ. 50,000/- ದೊಂದಿಗೆ ಅರ್ಜಿಯನ್ನು ಅನ್‌ಲೈನ್ ಮೂಲಕ ಸಲ್ಲಿಸುವ ಅವಧಿ (Form- I ರಲ್ಲಿ) (ನಿಯಮ 4 ರಂತೆ). | 19-07-2021 ಮಧ್ಯಾಹ್ನ 12:00 ರಿಂದ 26-07-2021 ಸಂಜೆ 05:00 ರವರೆಗೆ |
| 3 | ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಿ ಟ್ರಸ್ಟ್ / ಸೊಸೈಟಿಗಳು ಸಲ್ಲಿಸುವ ಅರ್ಜಿಗಳನ್ನು ನಿರ್ದೇಶನಾಲಯದ ರಿಜಿಸ್ಟರ್‌ನಲ್ಲಿ ದಾಖಲಿಸುವ ಅವಧಿ (Form-II) – (ನಿಯಮ – 4 ರಂತೆ). | 27-07-2021 |
| 5 | ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿ ಸಲ್ಲಿಸಿರುವ ಹಾಗೂ ರಿಜಿಸ್ಟರ್‌ನಲ್ಲಿ ನೋಂದಾಯಿಸಲ್ಪಟ್ಟ ಟ್ರಸ್ಟ್ / ಸೊಸೈಟಿಗಳಿಗೆ ನಿರ್ದೇಶನಾಲಯದಿಂದ Letter of intentನ್ನು ಇಲಾಖಾ ಜಾಲತಾಣದಲ್ಲಿ ಪ್ರಕಟಿಸುವ ದಿನಾಂಕ<br>(ಭೌತಿಕ / ಇ-ಮೇಲ್‌ಗಳಲ್ಲಿ ಪ್ರತಿ / ಪತ್ರಗಳನ್ನು ಕಳುಹಿಸಲಾಗುವುದಿಲ್ಲ) | 28-07-2021 |
| 6 | ನಿರ್ದೇಶನಾಲಯದಿಂದ Letter of intent ಪಡೆದ ಟ್ರಸ್ಟ್ / ಸೊಸೈಟಿಗಳು 2021-22ನೇ ಶೈಕ್ಷಣಿಕ ಸಾಲಿನಿಂದಲೇ ಉದ್ದೇಶಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ನಿಯಮ 4(2) ಮತ್ತು 4(3) ರಂತೆ ಅಗತ್ಯ ಸಿದ್ದತೆಗಳನ್ನು ಈಗಾಗಲೇ ಮಾಡಿಕೊಂಡಿದ್ದಲ್ಲಿ, ಇದರೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ ಮಾಹಿತಿಯನ್ನು ರೂ.100/-ರ ಇ-ಸ್ಟಾಂಪ್‌ನಲ್ಲಿ ನೋಟರಿ ದೃಢೀಕೃತ ಮೂಲ ಪ್ರಮಾಣ ಪತ್ರವನ್ನು *puenc2122@gmail.com* ಗೆ ಕಳುಹಿಸುವ ಕೊನೆಯ ದಿನಾಂಕ | 30-07-2021 |
| 7 | ನಿರ್ದೇಶನಾಲಯವು ನೀಡಿರುವ Letter of intentಗೆ ಆಡಳಿತ ಮಂಡಳಿಯವರು 2021-22ನೇ ಶೈಕ್ಷಣಿಕ ಸಾಲಿನಲ್ಲಿಯೇ ಖಾಸಗಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಿ ನಿಯಮ – 4 ರಂತೆ ಸಿದ್ದತೆ ಮಾಡಿಕೊಂಡಿರುವ ಬಗ್ಗೆ ಸಲ್ಲಿಸಿದ ರೂ.100/-ರ ಇ-ಸ್ಟಾಂಪ್ ಮತ್ತು ಸ್ಥಳ ಪರಿಶೀಲನೆಗೆ ಅಗತ್ಯ ದಾಖಲೆಗಳನ್ನು ನಿಗದಿತ ನಮೂನೆಯೊಂದಿಗೆ (Form-I) ಪ್ರಸ್ತಾವನೆಯನ್ನು ಜಿಲ್ಲಾ ದ್ವಿಸದಸ್ಯ ಸಮಿತಿಗೆ ಸಂಬಂಧಿಸಿದ ಉಪನಿರ್ದೇಶಕರ ಮುಖಾಂತರ ತಲುಪಿಸುವ ಕೊನೆಯ ದಿನಾಂಕ | 04-08-2021 |
| 8 | ಜಿಲ್ಲಾ ತಪಾಸಣಾ ಸಮಿತಿಯು ಉದ್ದೇಶಿತ ಕಾಲೇಜುಗಳ ಸ್ಥಳ ಪರಿಶೀಲನೆ ನಡೆಸಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ವರದಿ ಸಲ್ಲಿಸುವ ಕೊನೆಯ ದಿನಾಂಕ (ನಿರ್ದೇಶನಾಲಯವು ಈ ಕುರಿತು ನಿರ್ದೇಶನ ನೀಡಿದ 10 ದಿನಗಳೊಳಗೆ) (ಪ್ರತಿ ಜಿಲ್ಲೆಯ ಪ್ರತಿ ತಾಲೂಕಿಗೆ ಒಂದು ತಪಾಸಣಾ ಸಮಿತಿ ರಚಿಸಬೇಕು)<br>ನಿರ್ದೇಶನ ನೀಡಿದ 07 ದಿನಗಳ ಒಳಗಾಗಿ ಸ್ಥಳ ಪರಿಶೀಲನೆ ನಡೆಸಿ, ತಪಾಸಣಾ ಸಮಿತಿಯು ವರದಿಯನ್ನು ದಾಖಲೆಗಳೊಂದಿಗೆ ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸುವುದು | 14-08-2021 |

| | | |
|---|---|---|
| 9 | ತಪಾಸಣಾ ಸಮಿತಿಯು ನೀಡುವ ವರದಿಯನ್ನು ಜಿಲ್ಲಾ ಉಪ ನಿರ್ದೇಶಕರು ಸಂಪೂರ್ಣ ಮಾಹಿತಿ / ದಾಖಲೆಗಳು / ಪ್ರಸ್ತಾವನೆಯನ್ನು ಸ್ಕ್ಯಾನ್ ಮಾಡಿ, ಪಿ.ಡಿ.ಎಫ್ ದಾಖಲೆಯನ್ನು *puenc2122@gmail.com* ಇಲ್ಲಿಗೆ ಕಳುಹಿಸಲು ಮತ್ತು ಹಾರ್ಡ್ ಪ್ರತಿಯನ್ನು ನಿರ್ದೇಶನಾಲಯಕ್ಕೆ ತಲುಪಿಸುವ ಕೊನೆಯ ದಿನಾಂಕ | 19-08-2021 |
| 10 | ಜಿಲ್ಲಾ ತಪಾಸಣಾ ಸಮಿತಿಯಿಂದ ಉಪನಿರ್ದೇಶಕರ ಮುಖಾಂತರ ನಿರ್ದೇಶನಾಲಯಕ್ಕೆ ಸಲ್ಲಿಸುವ ಪ್ರಸ್ತಾವನೆಗಳನ್ನು ನಿಯಮಗಳನ್ವಯ ಪರಿಶೀಲಿಸಿ ಟ್ರಸ್ಟ್ / ಸೊಸೈಟಿಗಳಿಗೆ ಖಾಸಗಿ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಕೋರಿಕೆಯನ್ನು ಪರಿಗಣಿಸಿ ಕಾಲೇಜು ಮಂಜೂರಾತಿಯನ್ನು / ಕಾಲೇಜು ಮಂಜೂರಾತಿಯನ್ನು ತಿರಸ್ಕರಿಸುವಂತೆ ಆದೇಶ ಹೊರಡಿಸುವ ಹಾಗೂ ಮಂಜೂರಾದ ಕಾಲೇಜುಗಳಿಗೆ ಪ್ರಥಮ ಶೈಕ್ಷಣಿಕ ಮಾನ್ಯತೆ ಪಡೆದುಕೊಳ್ಳುವಂತೆ ಸಂಬಂಧಿಸಿದ ಟ್ರಸ್ಟ್ / ಸೊಸೈಟಿ / ಜಿಲ್ಲಾ ಉಪನಿರ್ದೇಶಕರಿಗೆ ತಿಳಿಸುವ ಕೊನೆಯ ದಿನಾಂಕ (ಜಿಲ್ಲಾ ತಪಾಸಣಾ ಸಮಿತಿಯನ್ನು ನಿರ್ದೇಶನಾಲಯಕ್ಕೆ ವರದಿ ಸಲ್ಲಿಸಿದ 15 ಕೆಲಸದ ದಿನಗಳೊಳಗೆ) (ಮಾಹಿತಿಯನ್ನು ಇಲಾಖಾ ಅಂತರ್‌ಜಾಲದಲ್ಲಿ ಅಳವಡಿಸಲಾಗುವುದು) | 31-08-2021 |
| 11 | ನಿರ್ದೇಶನಾಲಯವು ಮಂಜೂರಾತಿ ನೀಡಿರುವ ಪದವಿ ಪೂರ್ವ ಕಾಲೇಜಿನ ಸ್ಥಳ ಪರಿಶೀಲನೆ ನಡೆಸಿ ಜಿಲ್ಲಾ ಉಪ ನಿರ್ದೇಶಕರು ನಿಯಮಗಳನ್ವಯ 2021-22ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಶೈಕ್ಷಣಿಕ ಮಾನ್ಯತೆ ನೀಡಲು (ಕಾಲೇಜಿನಲ್ಲಿ ಮೂಲಭೂತ ಸೌಲಭ್ಯಗಳಿರುವ ಬಗ್ಗೆ ಹಾಗೂ ಬೋಧಿಸಲು ಅವಕಾಶವಿರುವ ಭಾಷೆ / ವಿಷಯಗಳು / ಸಂಯೋಜನೆಗಳು / ವಿಭಾಗಗಳ ಮಾಹಿತಿಯೊಂದಿಗೆ ಟ್ರಸ್ಟ್ / ಸಂಸ್ಥೆಯಿಂದ ನಿಗದಿತ ಶುಲ್ಕಗಳನ್ನು ಪಾವತಿಸಿರುವ ಮೂಲ ಚಲನ್‌ಗಳು, ಭದ್ರತಾ ಠೇವಣಿ ಮತ್ತು ಸ್ಥಿರನಿಧಿ ಠೇವಣಿ ಪತ್ರದೊಂದಿಗೆ ಹಾಗೂ ಅಗತ್ಯ ಪ್ರಮಾಣ ಪತ್ರಗಳೊಂದಿಗೆ) ನಿಗದಿಪಡಿಸಿರುವ ಚೆಕ್‌ಲಿಸ್ಟ್‌ನಲ್ಲಿ (ಚೆಕ್‌ಲಿಸ್ಟ್ ನಮೂನೆ-6ರಲ್ಲಿ) ಪ್ರಸ್ತಾವನೆ ಸಲ್ಲಿಸಲು ಕೊನೆಯ ದಿನಾಂಕ (ನಿರ್ದೇಶನಾಲಯದಿಂದ ಸೂಚನೆ ಬಂದ 10 ದಿನಗಳ ಒಳಗೆ) | 10-09-2021 |
| 12 | ಜಿಲ್ಲಾ ಉಪ ನಿರ್ದೇಶಕರು ಸಲ್ಲಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿ ಮಂಜೂರು ಮಾಡಿರುವ ಪದವಿ ಪೂರ್ವ ಕಾಲೇಜಿಗೆ 2021-22ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಶೈಕ್ಷಣಿಕ ಮಾನ್ಯತೆಯನ್ನು ನಿರ್ದೇಶನಾಲಯದಿಂದ ನೀಡುವ ಕೊನೆಯ ದಿನಾಂಕ (ಜಿಲ್ಲಾ ಉಪ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿದ 15 ದಿನಗಳ ಒಳಗೆ) (ಮಾಹಿತಿಯನ್ನು ಇಲಾಖಾ ಅಂತರ್‌ಜಾಲದಲ್ಲಿ ಅಳವಡಿಸಲಾಗುವುದು) | 25-09-2021 |
| 13 | ಪ್ರಥಮ ಶೈಕ್ಷಣಿಕ ಮಾನ್ಯತೆ ಪಡೆದ ಖಾಸಗಿ ಪದವಿ ಪೂರ್ವ ಕಾಲೇಜುಗಳು 2021-22ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯುಸಿ ತರಗತಿಯ ದಾಖಲಾತಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ (ಪ್ರಥಮ ಶೈಕ್ಷಣಿಕ ಮಾನ್ಯತೆ ನೀಡಿದ ನಂತರದಲ್ಲಿ) | ದಾಖಲಾತಿ ಸುತ್ತೋಲೆ ಅನುಸಾರ |

Snehal

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ/ಸಿಬ್ಬಂದಿ-3/ಪಾಲಿಸಿ/ಹೊಕಾಅ/2021-22

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ,
ಮಲ್ಲೇಶ್ವರ, ಬೆಂಗಳೂರು-12,
ದಿನಾಂಕ: 17-07-2021

## -: ಪ್ರಕಟಣೆ :-

ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4 ರನ್ವಯ 2021-22ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದಲ್ಲಿ ಹೊಸ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇಚ್ಛಿಸುವ ಅರ್ಹ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ / ಟ್ರಸ್ಟ್‌ಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ "ಅರ್ಜಿ ನಮೂನೆ" (FORM-I) ರಲ್ಲಿ **ದಿನಾಂಕ:19-07-2021 ಮಧ್ಯಾಹ್ನ 12:00 ರಿಂದ 26-07-2021 ಸಂಜೆ 05:00ರ** ಒಳಗೆ ಹೆಸರನ್ನು ನೋಂದಾಯಿಸಿ ಕೊಳ್ಳಲು ಜಂಟಿ ನಿರ್ದೇಶಕರು (ಮಾ&ಅ) ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವುದು. ಅರ್ಜಿ ನಮೂನೆ ಮತ್ತು ಹೆಚ್ಚಿನ ವಿವರಗಳನ್ನು ಇಲಾಖೆಯ ವೆಬ್‌ಸೈಟ್ **"www.pue.kar.nic.in"** ಇಲ್ಲಿಂದ ಲಾಗಿನ್ ಆಗಿ ಪಡೆಯಬಹುದು.

2019-20 ಮತ್ತು 2020-21ನೇ ಶೈಕ್ಷಣಿಕ ಸಾಲಿನಲ್ಲಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಆನ್‌ಲೈನ್ ಮೂಲಕ ಈಗಾಗಲೇ ಹೊಸ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜು ಮಂಜೂರು ಕೋರಿ ಅರ್ಜಿ ಸಲ್ಲಿಸಿರುವ ಖಾಸಗಿ ಶಿಕ್ಷಣ ಸಂಸ್ಥೆ / ಟ್ರಸ್ಟ್‌ಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ. ಒಂದು ವೇಳೆ ತಮ್ಮ ಅರ್ಜಿಯು ಇಲಾಖೆಯಿಂದ ತಿರಸ್ಕೃತಗೊಂಡಿದ್ದಲ್ಲಿ / ಮಾನ್ಯ ಆಗದಿದ್ದಲ್ಲಿ / ಆಕ್ಷೇಪಣೆಗೊಳಿಸಿದ್ದಲ್ಲಿ 2021-22ನೇ ಸಾಲಿನ ಸ್ಥಳ ಪರಿಶೀಲನೆ ಸಮಿತಿಯಲ್ಲಿಯ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರ ಮುಖಾಂತರ ಸಲ್ಲಿಸುವುದನ್ನು ಕಡ್ಡಾಯಗೊಳಿಸಿದೆ.

Snehal

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ